ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 2, May-June 2023, Pp. 35-38
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ದಾನದ ಪರಿಕಲ್ಪನೆ: ವೇಮನನ ನಿಲುವುಗಳು

**ಡಾ. ಜಾಜಿ ದೇವೇಂದ್ರಪ್ಪ**

ಮುಖ್ಯಸ್ಥರು, ಕನ್ನಡ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗಂಗಾವತಿ

***Abstract:***

*ಭಾರತೀಯ ಸಂಸ್ಕೃತಿಯ ಸಂದರ್ಭದಲ್ಲಿ 'ದಾನ'ಕ್ಕೆ ಒಂದು ವಿಶೇಷವಾದ ಮಹತ್ವವಿದೆ. ಪ್ರಾಚೀನ ಭಾರತದಲ್ಲಿ 'ದಾನ' ಎಂಬುದು ಆರ್ಥಿಕವಾಗಿ ಸದೃಢವಾಗಿದ್ದು, ಕೂಡಿಟ್ಟ ಧನವನ್ನು ಅದರ ಒಂದು ಅಂಶವನ್ನು ವಿನಿಯೋಗ ಮಾಡುವ ಕ್ರಮ ರೂಢಿಯಲ್ಲಿತ್ತು. ಇದು ಕೂಡ ಆರ್ಥಿಕ ಚಿಂತನೆಯ ಪರಿಧಿಯೊಳಗೆ ಬರುತ್ತದೆ. ಆದರೆ ಈ ದೇಶದ 'ದಾನ'ದ ಪರಿಕಲ್ಪನೆಯು ಹಲವು ಮಿತಿಗೆ ಮತ್ತು ವಿಕಾರಕ್ಕೆ ಆಸ್ಪದವಾದದ್ದನ್ನೂ ಚರಿತ್ರೆಯಲ್ಲಿ ಗಮನಿಸಬಹುದಾಗಿದೆ. ಈ ಹಿನ್ನಲೆಯಲ್ಲಿ ಮಹಾಯೋಗಿ ವೇಮನನ ವಚನಗಳಲ್ಲಿ ಕಂಡುಬರುವ ದಾನದ ಪರಿಕಲ್ಪನೆಯ ನಿಲುವುಗಳನ್ನು ಈ ಲೇಖನದಲ್ಲಿ ಪ್ರಸ್ತುತಪಡಿಸಲಾಗಿದೆ.*

***Keywords:*** *ಕನ್ನಡ ಸಾಹಿತ್ಯ, ತೆಲುಗು ಸಾಹಿತ್ಯ, ವೇಮನ, ದಾನ, ಧರ್ಮ.*

## ಪೀಠಿಕೆ

ಸಾಮಾನ್ಯವಾಗಿ ಭಾರತೀಯ ಸಾಂಪ್ರದಾಯಿಕ ಪರಂಪರೆಯಲ್ಲಿ ದಾನ–ಧರ್ಮ ಎಂಬ ಎರಡು ಪದಗಳು ಏಕಕಾಲಕ್ಕೆ ಸಂಬೋಧಿಸಲ್ಪಡುತ್ತವೆ. ಅಂದರೆ ದಾನದಲ್ಲಿ ಧರ್ಮವಿದೆ, ಧರ್ಮವು ದಾನವನ್ನು ಪೋಷಿಸುತ್ತದೆ. ಈ ದಾನಧರ್ಮವು ಅಂದರೆ ದಾನ ಮಾಡುವುದು ಮನುಷ್ಯನಾದವನ ಮೂಲಭೂತ ಧರ್ಮ ಆಗಿರಬೇಕೆಂಬ ಒಳ್ಳೆಯ ಅರ್ಥವಿದೆ. ಇದು ಮುಂದಿನ ದಿನಗಳಲ್ಲಿ ಅಕ್ಷರಶಃ ಧರ್ಮದ ನಿಯಂತ್ರಣಕ್ಕೆ ಸಿಲುಕಿಹಾಕಿಕೊಂಡಿತೆನ್ನಬಹುದು. ದಾನಕೊಡುವವ ಶ್ರೀಮಂತ ಪಡೆಯುವವ ಪುರೋಹಿತ ಎಂಬಷ್ಟಕ್ಕೆ ಸೀಮಿತವಾಯಿತು. ಅಂತೆಯೇ ಕನ್ನಡನಾಡಿನಲ್ಲಿ ದೊರೆಯುವ ಅದೆಷ್ಟೋ ಶಾಸನಗಳಲ್ಲಿಯೂ ಕೂಡ ದಾನದ ಉಲ್ಲೇಖವಿದೆ. ಕನ್ನಡದಲ್ಲಿ ದೊರೆತ ಬಹುಪಾಲು ಶಾಸನಗಳ ದಾನಶಾಸನಗಳೇ ಆಗಿದೆ. ಇಲ್ಲಿ ಭೂದಾನ–ಗೋದಾನ–ವಸ್ತ್ರದಾನ–ಧಾನ್ಯದಾನ–ಕನಕದಾನ–ಇತ್ಯಾದಿಗಳ ಉಲ್ಲೇಖವಿದೆ. ಇವೆಲ್ಲವುಗಳನ್ನು ಸ್ವೀಕರಿಸಿರುವುದು ಅತಿಹೆಚ್ಚು ಪುರೋಹಿತಶಾಹಿಗಳೇ ಮತ್ತು ದೇವಾಲಯಗಳೇ. ಆದರೆ ಜನಸಾಮಾನ್ಯರಿಗೆ ಇದು ದಕ್ಕಿದ್ದು ಕಡಿಮೆಯೇ ಎನ್ನಬಹುದು.

ಮಧ್ಯಕಾಲೀನ ಭಾರತೀಯ ಪರಿಸರದಲ್ಲಿ ಈ ದಾನದ ಪರಿಕಲ್ಪನೆಯು ಕೊಂಚ ಜನಮುಖಿ ಯಾಗುತ್ತಾ ನಡೆಯಿತೆಂದು ತೋರುತ್ತದೆ. ಹನ್ನೆರಡನೆಯ ಶತಮಾನದಲ್ಲಿ ವಚನಕಾರರು ನಡೆಸಿದ 'ದಾಸೋಹ' ವಿಧಾನವೂ ಕೂಡ ಒಂದು ಬಗೆಯಲ್ಲಿ ದಾನದ ಮತ್ತೊಂದು ರೂಪವಷ್ಟೇ. ಆದರೆ ಇಲ್ಲಿ ಕಾಯಕವೂ ಇತ್ತು. ಅನ್ನ ಪ್ರಸಾದವೂ ಇತ್ತು. ನಂತರ ಕಾಲಘಟ್ಟದಲ್ಲಿ ಬಂದ ಅನೇಕ ಶರಣ–ದಾಸ–ಸಂತ–ಸೂಫಿ–ತತ್ವಪದಕಾರರು ಸಂಪತ್ತಿನ ನಿರಾಕರಣೆಯನ್ನು ಮಾಡಲು ತೊಡಗಿದರು. ಗಳಿಸಿದ ಸಂಪತ್ತನ್ನು

***Please cite this article as:*** ಜಾಜಿ ದೇವೇಂದ್ರಪ್ಪ. (2023). ದಾನದ ಪರಿಕಲ್ಪನೆ: ವೇಮನನ ನಿಲುವುಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್.* 2(2), 35–38.

ವಿನಿಯೋಗಿಸಬೇಕಂತಲೂ ತಮ್ಮ ಸಾಹಿತ್ಯದ ಮುಖೇನ ಕರೆನೀಡಿದರು. "ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ" ಎಂದು ದಾಸರು ಹಾಡಿದರು. ಸಂಗ್ರಹವು ಯಾವತ್ತೂ ಯೋಗ್ಯವಾದುದಲ್ಲ ಎಂಬ ಅಭಿಪ್ರಾಯ ಅವರದಾಗಿತ್ತು. ಶರಣರಲ್ಲಿ ಬರುವ ಈಸಕ್ಕಿ ಆಸೆ ನಮಗೇಕೆ ಎಂಬ ಲಕ್ಕಮ್ಮನ ಆರ್ಥಿಕ ನಿಲುವು ಕೂಡ ಧನ, ಸಂಪತ್ತು ಸಂಗ್ರಹದ ನಿರಾಕರಣೆಯ ಭಾಗವೇ ಆಗಿದೆ. ಇದರ ಆಳದಲ್ಲಿ 'ದಾನ' ಮಾಡಬೇಕೆಂಬ ಸೂಕ್ಷ್ಮವಾದ ಚಿಂತನಾ ಕ್ರಮಗಳಿವೆ. ಈ ಹಿನ್ನೆಲೆಯಲ್ಲಿ ಬಯಲು ಸಂತನಾದ ವೇಮನನ ವಿಚಾರಗಳಿವೆ. ದಾನದ ಕುರಿತ ವೇಮನನ ಚಿಂತನಾಧಾರೆಯು ವಿಭಿನ್ನವಾಗಿದೆ ಮತ್ತು ಜನಪರವೂ ಆಗಿದೆಯೆಂಬುದನ್ನೂ ಗಮನಿಸಬಹುದು.

ವೇಮನ ಕವಿಯು ಕೂಡ ಸಂಪತ್ತಿನ ಸಂಗ್ರಹ ಯೋಗ್ಯವಾದದ್ದಲ್ಲವೆಂಬ ನಿಲುವನ್ನು ತಾಳುತ್ತಾನೆ. ಪ್ರಖರ ಆರ್ಥಿಕ ಚಿಂತನೆ ಮಾಡಿದ ಈ ಅನುಭಾವಿ ಕವಿಯ ಮನೋಮಂದಿರದಲ್ಲಿ ಸಹಜವಾಗಿ ಸಂಪತ್ತು ಮತ್ತು ಬಡತನ ಇವೆರಡರ ನಡುವಣ ಮುಖಾಮುಖಿ ಅನುಸಂಧಾನವಾಗಿದೆ. ಮೂಲತಃ ಸಂಪದ್ಭರಿತ ಮನೆತನದಿಂದ ಬಂದ ಕವಿ ವೇಮನ ಬಯಲುದಾರಿಯಲ್ಲಿ ಓಡಾಡಿ ಜನರೊಂದಿಗೆ ಬೆರೆತು, ಜನಸಂಸ್ಕೃತಿಯನ್ನು ಅರಿತವನು. ಶ್ರೀ ಸಾಮಾನ್ಯರ ಬದುಕಿನ ತಲ್ಲಣಗಳನ್ನು ಹತ್ತಿರದಿಂದ ನೋಡಿದವನಾದ್ದರಿಂದ ಉಳ್ಳವರ ಮತ್ತು ಇಲ್ಲದವರ ನಡುವಣವಿರುವ ಸಾಮಾಜಿಕ ಅಂತರವನ್ನು, ಅಂತರಾಳವನ್ನು ಬಲ್ಲವನಾದ ಕವಿಯ ಚಿಂತನೆ ಮುಖ್ಯವಾದದ್ದು. ಅಲ್ಲದೇ ಮೂಲತಃ ಸಂತನ ಬದುಕೆಂದರೆ ಅದು ಆಸೆ-ಆಮಿಷ ರಹಿತವಾದದ್ದು. ಈ ಸೈದ್ಧಾಂತಿಕ ನಿಲುವಿನ ಬುನಾದಿಯ ಮೇಲೆಯೇ ಯೋಚಿಸಿದ ವೇಮನ–

***ಏನಿದ್ದರೇನು ಇರದಿದ್ದರೇನು***
***ಹುಟ್ಟುವಾಗ ಏನಿಲ್ಲ ಬಟ್ಟೆ ನಡೆವಾಗ ಎಂತಿಲ್ಲ***
***ಧನವ್ಯಾರಿಗೋ ಅದರ ಫಲವಾರಿಗೊ.***

ಎನ್ನುವ ಮೂಲಕ ಬದುಕಿನ ಸತ್ಯ ಮತ್ತು ಧನದ ಮಿಥ್ಯತೆಯನ್ನು ಕವಿ ನಿರೂಪಿಸಿರುವುದು ಅರ್ಥಪೂರ್ಣವಾಗಿದೆ. ಇದು ಮೇಲ್ನೋಟಕ್ಕೆ ಪಾರಮಾರ್ಥಿಕವೆನಿಸುತ್ತದೆ. ಸಂಪತ್ತಿದ್ದರೂ, ಇಲ್ಲದಿದ್ದರೂ ಬಟ್ಟೆ ಅಂದರೆ ದಾರಿಬಿಟ್ಟು ನಡೆವಾಗ ಆ ಧನ ಯಾರಿಗೆ ಸಲ್ಲುತ್ತದೊ ಎಂಬ ನಿರರ್ಥಕತೆ ಭಾವನೆಯನ್ನು ಒತ್ತಿ ಹೇಳಿದ್ದಾನೆ. ನಮ್ಮ ಪ್ರಾಚೀನ ಚಿಂತನೆಗಳು ಕೂಡ ಜೀವನದ ನಿಸ್ಸಾರತೆಯ ಸಂದರ್ಭದಲ್ಲಿ ಇಂತಹ ಬೋಧನೆಗಳನ್ನು ಮಾಡಿದೆ. ವೇಮನ ಕವಿಯು ಮುಂದುವರೆದು–

***ದೇಹಯಾರ ಆಸ್ತಿ ರಕ್ಷಿಸುವವರ್ಯಾರು***
***ಜೀವಯಾರ ಆಸ್ತಿ ಭಕ್ತಿ ಮಾಡುವರು***
***ಧನವು ಯಾರ ಸೊತ್ತು ಧರ್ಮವೇ ತನ್ನ ಸೊತ್ತು.***

ಎಂಬಲ್ಲಿಯೂ ಕೂಡ ದೇಹಮೀಮಾಂಸೆ–ಜೀವಮೀಮಾಂಸೆ–ಸಂಪತ್ತಿನಮೀಮಾಂಸೆ ಮತ್ತು ಭಕ್ತಿಮೀಮಾಂಸೆ ಧರ್ಮದ ನೆಲೆ ಎಲ್ಲವುಗಳ ಕಾರ್ಯ ಕಾರಣ ಸಂಬಂಧವನ್ನು ಬೆಸೆಯುವ ಅಪರೂಪದ ತತ್ವಮೀಮಾಂಸೆಯನ್ನು ಹೇಳಿದ್ದಾನೆ. ದೇಹವು ಈ ಭೂಮಿಯ ಮೇಲೆ ಭೌತಿಕವಾದದ್ದು. ಈ ಭೌತಿಕ ದೇಹ ಚೇತನ ಸ್ವರೂಪ ಪಡೆಯಲು ಜೀವಬೇಕು. ಇವನ್ನು ರಕ್ಷಿಸಿಕೊಳ್ಳಲು ಭಯ–ಭಕ್ತಿ–ಧನಗಳು ಬೇಕು. ಈ ಧನ ಯಾವ ಮೂಲದಿಂದ ಬಂದಿದೆ. ಅದು ಯಾರ ಸೊತ್ತೋ ತಿಳಿಯದು. ಆದರೆ ಇದನ್ನು ದಾನ ಕೊಡಲೇ ಬೇಕಾದುದು ಧರ್ಮವೆಂದು ಅರಿಯಬೇಕು. ದೇಹ–ಜೀವ–ಭಕ್ತಿ–ಧನ ಇವುಗಳಿಗಿಂತ ಧರ್ಮವೇ ಮನುಷ್ಯನ ನಿಜವಾದ ಸಂಪತ್ತು. ಈ ಧರ್ಮ ಮಾನವ ಆಚರಣೆಗಾಗಿ ರೂಢಿಸಿಕೊಂಡ ಹಿಂದೂ–ಮುಸ್ಲಿಂ–ಕ್ರೈಸ್ತ–ಜೈನ–ಬೌದ್ಧ ಇತ್ಯಾದಿಗಳಲ್ಲ. ಅದು ಜೀವನಧರ್ಮ–ಕರುಣೆ, ಪ್ರೀತಿ ವಾತ್ಸಲ್ಯದ ಧರ್ಮ.

ವೇಮನನ ಪ್ರಕಾರ ಸಂಪತ್ತಿನ ಸಂಗ್ರಹವು ಅಮಾನ್ಯವಾದುದು. ಇದು ಅವಿವೇಕಿಗಳ ಕೆಲಸ. ಹಸಿದವನಿಗೆ ಅನ್ನಕೊಡುವ, ತೃಷೆಯಾದೊಡೆ ನೀರುಣಿಸುವವನೇ ನಿಜವಾದ ಜ್ಞಾನಿ, ವಿವೇಕಿ. ಮನುಷ್ಯ ಅಂಧಕಾರದಿಂದಲೇ ಸಂಪತ್ತನ್ನೂ

ಹೇರಳವಾಗಿ ಸಂಗ್ರಹಿಸುತ್ತಾನೆಂಬುದು ಕವಿಯ ವಾದ. ಸರ್ವದಾನಗಳಿಗಿಂತ ಅನ್ನದಾನವೇ ಪರಮಶ್ರೇಷ್ಠವಾದುದೆಂದು ವೇಮನ ತನ್ನ ನಿಲುವನ್ನೂ ಮಂಡಿಸಿದ್ದಾನೆ.

***ಹಿಡಿಯನ್ನದ ಬೋನ ಜಗದಾರ್ಪಣವೆಂದವನು***
***ಪುಣ್ಯಲೋಕಕ್ಕೆ ಸಲ್ಲುವವನವದು***
***ಅನ್ನದಾನಕ್ಕಿಂತ ಅಧಿಕದಾನವೇ ಇಲ್ಲ***
***ವಿಶ್ವದಾಭಿರಾಮ ಕೇಳುವೇಮ.***

ಈ ವಚನದಲ್ಲಿ ದಾನಕ್ಕೂ ಮತ್ತು ಹಸಿವಿಗೂ ನೇರ ಸಂಬಂಧವನ್ನೂ ಕಲ್ಪಿಸಲಾಗಿದೆ. ಹಸಿವು ಶಾಶ್ವತವಾದುದು. ದಾನ ಅಶಾಶ್ವತವಾದದ್ದು. ಆದರೆ ಕೊಂಚ ಕ್ಷಣವಾದರೂ ಹಸಿವನ್ನು ನೀಗಿಸಲದೇ ಶ್ರೇಷ್ಠ ದಾನವೆಂಬುದನ್ನೂ ವೇಮನ ಸಾರಿದನು. ಮಾತ್ರವಲ್ಲ ಒಂದು ತುತ್ತು ಅನ್ನ ವಿಶ್ವಾರ್ಪಣೆಯೆಂದು ತೆಗೆದಿರಿಸುವವನು ಪುಣ್ಯಲೋಕಕ್ಕೆ ಸಲ್ಲುತ್ತಾನೆಂಬ ಶರಾವನ್ನೂ ಕೂಡ ಕವಿ ಬರೆಯುತ್ತಾನೆ. ಅನ್ನದಾನಕ್ಕಿಂತ ಅಧಿಕದಾನವಿಲ್ಲ ಎಂಬಲ್ಲಿ ಹಸಿವೇ ಪ್ರಧಾನವಾದದ್ದು. ಇದನ್ನು ಮೊದಲು ನೀಗಿಸಬೇಕೆಂಬ ಜೀವಪರ-ದಯಾಪರ ನಿಲುವು ಇಲ್ಲಿದೆ.

ದಾನವೂ ಕೂಡ ಯಾರಿಗೆ ಸಲ್ಲಬೇಕು, ಯಾರಿಗೆ ಸಲ್ಲಬಾರದು ಎಂಬ ಚಿಂತನೆಯನ್ನು ವೇಮನ ಮಾಡಿದ್ದಾನೆ. ಸಾಮಾನ್ಯವಾಗಿ ನಮ್ಮ ಭಾರತೀಯ ಸಾಂಪ್ರದಾಯಿಕ ನೆಲೆಯಲ್ಲಿ ದಾನ ಪಡೆಯುವ ಬಹುತೇಕ ಸಮುದಾಯವು ಪುರೋಹಿತ, ವೈದಿಕಶಾಹಿಯೇ ಆಗಿದೆ. ಬ್ರಾಹ್ಮಣರಿಗೆ ನೀಡುವ ದಾನಧರ್ಮ ಶ್ರೇಷ್ಠವಾದುದೆಂದು ಕೆಲವು ಶಾಸ್ತ್ರಗಳು-ಶಾಸನಗಳು ಕೂಡ ಉಲ್ಲೇಖಿಸಿವೆ. ಆದರೆ ನಿಜವಾದ ಹಸಿವು ಇರುವ ಜನವರ್ಗಕ್ಕೆ ದಾನ ಸಲ್ಲಬೇಕೆಂಬುದನ್ನು ವೇಮನ ಒತ್ತಿ ಹೇಳಿದ್ದಾನೆ-

***ಅನ್ನವಿರುವವನಿಗೆ ಅನ್ನವನಿಟ್ಟರೆ***
***ಬರುವ ಫಲವಾದರೂ ಎಂತು***
***ಧನಿಕನಿಗೆ ದಾನವಿಟ್ಟರೆ ಬರುವ ಭಾಗ್ಯವದೇನು***
***ವಿಶ್ವದಾಭಿರಾಮ ಕೇಳುವೇಮ.***

ನಿಜವಾದ ಹಕ್ಕುದಾರನಿಗೆ, ಹಸಿವುಳ್ಳವನಿಗೆ, ಸತ್ಪಾತ್ರನಿಗೆ ದಾನ ಸಲ್ಲಬೇಕು. ಸಂಪತ್ತಿನ ಸಂಗ್ರಹಮಾಡಬಾರದೆಂದು ಹೇಳಿದರೂ ವೇಮನ ಧನದ ಸಂಪತ್ತಿನ ವಿರೋಧಿಯೇನಲ್ಲ. ಅವನು ಭೋಗದಿಂದ ಯೋಗದ ಕಡೆ ಚಲಿಸುತ್ತಾ ಬಂದ ಬಯಲು ಯೋಗಿ. ಶ್ರೀಮಂತಿಕೆಯಿಂದ ಶ್ರೀಸಾಮಾನ್ಯ ಆಗಿ ಬದುಕಿದವನು. ಸಂಪತ್ತಿನ ಅಗತ್ಯತೆ ಅವನಿಗೆ ಗೊತ್ತು. ಆದರೆ ಸಂಪತ್ತಿನ ಸದ್ವಿನಿಯೋಗ, ಸಮಾನ ಹಂಚಿಕೆಯಾಗಬೇಕೆಂಬ ಆಶಯ ವೇಮನ ಕವಿಗಿದೆ. ಆದ್ದರಿಂದಲೇ ಕವಿಯು ಹೀಗೆ ವ್ಯಾಖ್ಯಾನಿಸುತ್ತಾನೆ-

***ಧನವ ಕೂಡಿಟ್ಟು ಧರ್ಮವ ಮಾಡದೇ***
***ತಾನುಣ್ಣದೇ ಪರರಿಗೂ ನೀಡದೇ***
***ಜೇನುಹುಳು ತುಪ್ಪ ಬೇರೆಯವರಿಗೆ ಕೊಟ್ಟಂತೆ.***

ಎಂಬ ರೂಪಕದ ಸುಂದರ ಪದ್ಯವನ್ನು ಹೇಳುತ್ತಾನೆ. ಜೇನುಹುಳ ಬಹುಶ್ರಮದಿಂದ ಜೇನುತುಪ್ಪವನ್ನು ಉತ್ಪಾದಿಸಿ ಪರರಿಗೆ ತಿನ್ನಲು ಬಿಟ್ಟಂತೆ. ದಾಸರೂ ಕೂಡ ಹೇಳಿದ ಕೊಟ್ಟದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ ಎಂಬ ಮಾತಿಗೆ ಸಂವಾದಿಯಾಗಿದೆ. ಅಪರಿಮಿತವಾಗಿ ಧನಕೂಡಿಟ್ಟವನು ದಾನ ಮಾಡಲೇಬೇಕೆಂಬ ಒತ್ತಾಸೆ ಇಲ್ಲಿದೆ. ಯಾರೇ ಸಂಪಾದಿಸಿದರು ಅದು ಸಕ್ರಮವಾದದ್ದೇನೂ ಅಲ್ಲ. ದುಡಿಯುವ ವರ್ಗದ ಶ್ರಮದ ಸಾಧ್ಯತೆಗಳಿಂದಲೇ ಸಂಪಾದಿಸಬೇಕಲ್ಲವೇ. ಭೂಮಿ, ಗಾಳಿ, ನೀರು, ಯಾರ ಸೊತ್ತು. ಇದು ನಿಸರ್ಗದ ಕೊಡುಗೆ. ಪ್ರತೀ ಮನುಷ್ಯನು ಇದಕ್ಕೆ ಹಕ್ಕುದಾರ. ಆದರೆ ವರ್ತಮಾನದ ಜಗತ್ತಿನಲ್ಲಿ ಸಂಪತ್ತೆಂಬುದು ಕೆಲವರ ಪಾಲಾಗಿದೆ. ಖನಿಜ, ಭೂಮಿ ಇತ್ಯಾದಿಗಳು ಕೆಲವರ ಒಡೆತನದಲ್ಲಿವೆ. ಇದೇ ಅಸಮಾನ ಹಂಚಿಕೆ. ಈ ಸತ್ಯವನ್ನು ವೇಮನ ಕವಿ ಅಂದೇ ಹೇಳಿದ್ದು ಹೀಗೆ-

***ಭೂಮಿ ನನ್ನದೆಂದರೆ ಫಕ್ಕನೇ ಭೂಮಿ ನಗುವುದು***
***ದಾನಹೀನನ ಕಂಡು ಧನವು ನಗುವುದು***
***ವಿಶ್ವದಾಭಿರಾಮ ಕೇಳುವೇಮ.***

ಆಧುನಿಕ ಕಾಲಘಟ್ಟದಲ್ಲಿಯೂ ಕಾರ್ಲ್‌ಮಾರ್ಕ್ಸ್ ಸಿದ್ಧಾಂತವೂ ಕೂಡ ಸಂಪತ್ತಿನ ಸಮಾನ ಹಂಚಿಕೆಯ ಸಿದ್ಧಾಂತವನ್ನು ಹೇಳಿದೆ. ಅಂತೆಯೇ ಎಲ್ಲಾ ಕಾಲದಲ್ಲಿಯೂ ಚಿಂತಕರು ಈ ತತ್ವವನ್ನು ಹೇಳುತ್ತಲೇ ದುಡಿಯುವ ವರ್ಗದ ಜನಸಾಮಾನ್ಯರ ಪರವಾಗಿ ನಿಂತಿದ್ದಾರೆ. ಅಂತೆಯೇ ವೇಮನ ಕವಿಯೂ ಕೂಡ ಕಡುಲೋಭಿಗಳನ್ನೂ ಕಟುವಾಗಿ ನಿಂದಿಸುತ್ತಾನೆ ಮತ್ತು ದಾನ ಮಾಡಬೇಕೆಂದು ಆ ಮೂಲಕ ದುಡಿದವರ ಪಾಲನ್ನೂ ಅವರಿಗೆ ಹಂಚಬೇಕೆಂದು ತಾತ್ವಿಕವಾಗಿ ಹೇಳಿರುವುದು ವಿಶೇಷವಾಗಿದೆ.

**ಪರಾಮರ್ಶನ ಗ್ರಂಥಗಳು**


- ಬಿ.ವಿ.ಎಸ್. (1889). *ವೇಮನ ಪದ್ಯಮುಲು.* (ತೆಲುಗು) ಗೊಲ್ಲಪುಡಿ ವೀರಸ್ವಾಮಿ ಸನ್ಸ್.
- ಹಳಕಟ್ಟಿ ಫ.ಗು (1951). *ವೇಮಣ್ಣ ಯೋಗಿಯ ವಚನಗಳು.* ಶಿವಾನುಭವ ಗ್ರಂಥಾಮಾಲಾ.
- ಪಾಟೀಲ್ ಎಸ್ ಆರ್. (1993). *ಮಹಾಯೋಗಿ ವೇಮನ.* ವೇಮನಗ್ರಂಥಮಾಲಾ.
- ರಾಷ್ಟ್ರ ಕಂಡ ಬಹುದೊಡ್ಡ ಯೋಗಿ ವೇಮನ: ಶ್ರೀ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು. (2020, ಜನವರಿ 19). *ಪ್ರಜಾಪ್ರಗತಿ ಆನ್ಲೈಲ್ ಪತ್ರಿಕೆ.* *https://prajapragathi.com/local-kannada-news-yog-vemana-jayanthi/*